ಶ್ರೀ ಸಿದ್ದಯ್ಯ ಕಾಶೀಮಠ.—ಗದಗು—ಇದು ನರಗುಂದ ನವಲಗುಂದ ಶಿರಹಟ್ಟಿ ಇವುಗಳಿಗೆ ಕೇಂದ್ರವಾಗುತ್ತದೆ. ಇಲ್ಲ ಕೋರ್ಟು ಆಗುವುದರಿಂದ ಜನರಿಗೆ ಅನುಕೂವಾಗುತ್ತದೆ. ಜನರ ಕಷ್ಟ ನಿವಾರಣೆ ಮಾಡಿ ಗದಗಿನಲ್ಲಿ ಕೋರ್ಟು ಸ್ಥಾಪಿಸಬೇಕೆಂಬುದನ್ನು ಬೇಗನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಧಾರವಾಡ ಜಿಲ್ಲೆಯಲ್ಲಿ ಈಗ ಎರಡು ಕೋರ್ಟು ಮಾಡಬೇಕೆಂದು ಮಾಡಿದ್ದೇವೆ. ಒಂದು ಧಾರವಾಡದಲ್ಲಿ ಹಾಗೂ ಒಂದು ಹುಬ್ಬಳ್ಳಿಯಲ್ಲಿ ಹೀಗೆ ಎರಡು ಸಿವಿಲ್ ಕೋರ್ಟುಗಳು ಈಗ ಇವೆ. ಎರಡು ಕೋರ್ಟು ಜಾಸ್ತಿ ಮಾಡಬೇಕೆಂದಿದ್ದೇವೆ. ಕೆಲಸ ನರಿಯಾಗಿ ಹಂಚುವುದಕ್ಕಾಗುವುದಿಲ್ಲ. ಆದುದರಿಂದ ಮೂರು ಕೋರ್ಟು ಆಗಬಹುದು ಎಂದು ನರಕಾರದ ವಿಚಾರದಲ್ಲಿವೆ. ಯಾವ ಕೋರ್ಟು ತೆರೆಯಬೇಕು ಎಂಬುದು ವಿಚಾರ ಇದೆ. ಧಾರವಾಡ ಅಥವಾ ಹುಬ್ಬಳ್ಳಿಯಲ್ಲಿಯ ಸಿವಿಲ್ ಕೋರ್ಟು ತೆರೆಯುವುದು ಸರಳವಾದ ಪ್ರಶ್ನೆಯಲ್ಲ. ಆದುರಿಂದ ಇದನ್ನು ಯೋಚನೆ ಮಾಡಬೇಕಾಗುತ್ತದೆ.

Restoration Work of the Wasteweir in Neeragunda

* *Q.*—301. Sri M. RAMAPPA (Hosadurga).—

Will the Minister for Public Works be pleased to state:—

the stage at which the restoration work of the wasteweir in Neeragunda Village, Hosadurga Taluk stands ?

A.—Sri ALUR HANUMANTHAPPA (Deputy Minister for Irrigation).—

Under investigation in the Department.

ಶ್ರೀ ಎಂ. ರಾಮಪ್ಪ.—ಈ ವಿಷಯವು ಪರಿಶೀಲನೆಯಲ್ಲಿದೆ ಎಂದು ಉತ್ತರ ಹೇಳಿದೆ. ಏನು ಪರಿಶೀಲನೆಯಲ್ಲಿದೆ ? ಇದು ಯಾವ ವಿಷಯ !

† ಶ್ರೀ ಆಲೂರು ಹನುಮಂತಪ್ಪ.—ರಿಸ್ಟೋರೇಷನ್ ಕೆಲಸ ಪರಿಶೀಲನೆಯಲ್ಲಿದೆ ಎಂದು ಹಾಗೆ ಹೇಳಿದೆ. ಇದರ ಅಂದಾಜು ತಯಾರಾಗಿದೆ. ಅಪ್ರೂವಲ್ ಆಗಿದೆ. ಇನ್ನು ಕೆಲಸ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ರಾಮಪ್ಪ.—ಎಸ್ಟಿಮೇಟು ಅಪ್ರೂವ್ ಆದುದು ಯಾವಾಗ ?

ಶ್ರೀ ಆಲೂರು ಹನುಮಂತಪ್ಪ.—ತಾರೀಖು ಎವರ ನಧ್ಯಕ್ಕೆ ಇಲ್ಲ. ಕೆಲಸ ಅಪ್ರೂವ್ ಆಗಿದೆ.

Construction of Tanks in Byadgi

* *Q.*—337. Sri M. G. BANAKAR (Byadgi).—

Will the Minister for Public Works be pleased to state :—

(*a*) the number of tanks constructed so far in Byadgi Taluk ;

(*b*) the number of tanks in respect of which sanction has been accorded ;

(*c*) whether any fresh demands have come in this regard ?

A.—Sri ALUR HANUMANTHAPPA (Deputy Minister for Minor Irrigation).—

(*a*) 2.
(*b*) Nil.
(*c*) Yes.

ಸ್ವಾಮೀ, (ಬಿ)ಗೆ ಉತ್ತರವಾಗಿ, ಇತ್ತೀಚೆಗೆ 7ನೇ ಜುಲೈ 1967ರಲ್ಲಿ ಅಂಗರಗಟ್ಟಿ ಕೆಲಸಕ್ಕೆ 6,81,000 ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ.

ಶ್ರೀ ಎಂ. ಜಿ. ಬಣಕಾರ್.—ನಾಲ್ಕನೇ ಯೋಜನೆ ಅವಧಿಯಲ್ಲಿ ಈ ಕೆಲಸವನ್ನು ಮುಕ್ತಾಯ ಗೊಳಿಸುತ್ತೀರಾ ಸ್ವಾಮಿ ?

†ಶ್ರೀ ಆಲೂರು ಹನುಮಂತಪ್ಪ.—ತೀವ್ರತೆಯಿಂದ ನೀರಾವರಿ ಕೆಲಸ ಮುಗಿಯಬೇಕು ಎನ್ನುವುದೇ ಸರ್ಕಾರದ ಉದ್ದೇಶ.

ಶ್ರೀ ಎಂ. ಜಿ. ಬಣಕಾರ್.—ಬ್ಯಡಗಿ ತಾಲ್ಲೂಕಿನಲ್ಲಿ ಹೊಳೆ ಹಳ್ಳಗಳಿಲ್ಲದೆ ಯಾವುದೇ ರೀತಿಯ ನೀರಾವರಿ ಸೌಲಭ್ಯವಿಲ್ಲದೆ ಇರುವ ಕಾರಣಕ್ಕಾಗಿ ಆದಷ್ಟು ಜಾಗ್ರತೆ—ಹಿಂದೆ ಎರಡು ಸಣ್ಣ ಕೆರೆಗಳ ನಿರ್ಮಾಣವಾಗಬೇಕಾದರೆ 20 ವರ್ಷ ಹಿಡಿಯಿತು. ಆರು ಲಕ್ಷ ರೂಪಾಯಿನ ಕೆಲಸ 60 ವರ್ಷದ ವರೆಗೂ ಹೋಗಬಾರದು—ಈ ಕೆಲಸವನ್ನು ಪೂರೈಸುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೇ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ಅಭಿಪ್ರಾಯ ಬಹಳ ನೂಕ್ಕ ವಾದುದು. ಕೆಲವು ಸಂದರ್ಭಗಳಲ್ಲಿ ನೀರಾವರಿಯಿಂದ ಮುಳುಗಡೆಯಾಗತಕ್ಕ ಪ್ರದೇಶದ ಜನರ ಅಡಚಣೆಗಳಿಂದ ತಡವಾಗುತ್ತದೆ. ಇತ್ತೀಚೆಗೆ ಸರ್ಕಾರದವರು ಮಂಜೂರು ಮಾಡಿರುವ ಕೆಲಸ ಗಳಿಗೆ ಹೆಚ್ಚಿನ ಅಧ್ಯತೆಯನ್ನು ಕೊಟ್ಟು, ಹೆಚ್ಚಿನ ಹಣ ಒದಗಿಸಿ ಆದಷ್ಟು ತೀವ್ರತೆಯಿಂದ ಅವು ಗಳನ್ನು ಮುಗಿಸಬೇಕು ಎಂದು ಆದೇಶವನ್ನು ಸರ್ಕಾರದವರು ಕೊಟ್ಟಿದ್ದಾರೆ.

ಶ್ರೀ ಎಂ. ಜಿ. ಬಣಕಾರ್.—ಈ ಕೆರೆ ನಿರ್ಮಾಣದ ಬಗ್ಗೆ ಜಮೀನು ಮಾಲೀಕರುಗಳಿಂದ ಏನಾದರೂ ತಮಗೆ ಅಡತಡೆ ಬಂದಿದೆಯೇ, ಸ್ವಾಮಿ ?

ಶ್ರೀ ಆಲೂರು ಹನುಮಂಪ್ಪ.—ಇದುವರೆಗೂ ಇದರಲ್ಲಿ ಯಾವ ಅಂಥ ಅಡಚಣೆಗಳೂ ಬಂದಿಲ್ಲ.

Teaching Grants to the Defunct District Board

* *Q*.—442. Sri M. M. J. SADYOJATHA (Kudligi).—

Will the Minister for Education be plased to state :—

(*a*) whether it is a fact that the Government is releasing Teaching Grant to the Defunct District Board, once in three months ;

(*b*) if so, whether Government would reconsider the release of Teaching grant before the commencement of the academic year ?

A.—Sri K. V. SHANKARA GOWDA (Minister for Education).—

(*a*) Yes.

(*b*) This is being examined.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಮೂರು ತಿಂಗಳಿಗೆ ಒಂದು ಗ್ರಾಂಟ್ ರಿಲೀಸ್ ಮಾಡುತ್ತಿರುವುದರಿಂದ ಬಡ ಉಪಾಧ್ಯಾಯರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?